

ಮದ್ಲೂರದ ಸಿದ್ದೇಶ್ವರ ಜಾನಪದ ರಂಗ ಕಲಾವಿದರು ಪ್ರದರ್ಶಿಸಿದ 'ಸಂಗ್ಯಾ ಬಾಳ್ಯಾ' ಸಣ್ಣಾಟದ ದೃಶ್ಯ

ತಮಾಶಾ ಪ್ರೇರಣೆಯ ಸಾಧ್ಯತೆಯಿದೆ. ಇದರಲ್ಲಿ ಹೆಣ್ಣು-ಗಂಡಿನ ಪೈಪೋಟಿಯ ಸವಾಲು- ಜವಾಬುಗಳನ್ನು 'ಡಪ್ಪು' ವಾದ್ಯ ನುಡಿಸುತ್ತಾ ಸಾದರಪಡಿಸುತ್ತಾರೆ. ಲಾವಣಿ ಪದಗಳು ಗೀಗೀ ಪದವೆಂದು ಸಣ್ಣಾಟದಲ್ಲಿ ಕಥೆಯ ರೂಪ ಪಡೆದಿವೆ. ಶ್ರವ್ಯರೂಪ ಲಾವಣಿ ಅಥವಾ ಗೀಗೀ ಪದ ದೃಶ್ಯರೂಪದ ಸಣ್ಣಾಟಕ್ಕೂ ಆಂತರಿಕ ಸಂಬಂಧವಿದೆ. ಮೇಳ, ಹಿಮ್ಮೇಳ, ಪಕ್ಕವಾದ್ಯ ನುಡಿಸುವ ಸಂಬಂಧವು ಸಂವಾದ-ಹಾಡು-ವಾದ-ವಿವಾದ, ದೃಷ್ಟಾಂತ, ನಿರೂಪಣೆ,ಅಧ್ಯಾತ್ಮ, ಅನುಭಾವ ಜಿಜ್ಞಾಸೆ - ಒಟ್ಟಿಗೆ ಸಮಕಾಲೀನ ಸಂದರ್ಭದ ರಂಜನೆಗಳು ಪ್ರಸಂಗಗಳು ಸೇರಿಕೊಂಡಿವೆ. ಪುರಾಣದ ಶಿವಶಕ್ತಿಯನ್ನು ಗಂಡುಹೆಣ್ಣಿನ ಶ್ರೇಷ್ಠತೆಯ ಪ್ರಸಂಗ ಮೂಲಕ ಚರ್ಚೆಗಳಿಗೆ ಇಳಿದು ಪುರಾಣಗಳನ್ನು ಒಡೆದು ಚದುರಿಸಿ ಕಟ್ಟಿ ವರ್ತಮಾನಕ್ಕೆ ತರುತ್ತಾರೆ.

ಹರದೇಶಿ- ನಾಗೇಶಿ ಇವು ಎರಡು ಪಂಥಗಳು, ಚಿಂತನಾ ಕ್ರಮಗಳು. ಇವು ಸ್ತ್ರೀ-ಪುರುಷ ವಸ್ತು ವಿಷಯ ಚರ್ಚಿಸುತ್ತ ಸಣ್ಣಾಟದ ಹುಟ್ಟು ಬೆಳವಣಿಗೆಗೆ ಕಾರಣವಾದವು ಎಂಬ ಅಭಿಪ್ರಾಯವಿದೆ. ರಾಧಾನಾಟ ಹುಟ್ಟಿಕೊಳ್ಳಲು ಇದೇ ಪ್ರೇರಣೆ ಆಯಿತು. ನಾಗೇಶಿ ಸಂಪ್ರದಾಯದ ಚಿಂತನೆ, ಹರದೇಶಿ ಪಂಥದ ಅನಿವಾರ್ಯತೆ ಅರ್ಥೈಸಿಕೊಂಡ ಇಂಗಳಗಿ ಹಸನಸಾಬ ಇದರಲ್ಲಿ ಸಾಮರಸ್ಯ ಕಲ್ಪಿಸಿ 'ರಾಧಾನಾಟ' ಬರೆದ. ಇದು ಬಹು ಪ್ರಸಿದ್ಧಿ ಪಡೆದ ನಾಟಕವಾಗಿ ಜಾನಪದ ರಂಗಭೂಮಿಯಲ್ಲಿ ಹೆಸರು ಮಾಡಿತು. ಸತತ ನಾಲ್ಕಾರು ದಿನ ಹಾಡುವ ಹಸನಸಾಬರ ಪ್ರತಿಭೆಯು ವಿಜಯಪುರ, ಕಲಬುರ್ಗಿ, ರಾಯಚೂರು, ಬೀದರ್ ಸೇರಿದಂತೆ ಹೈದರಾಬಾದ್ ನಿಜಾಮರ ತನಕ ಹಬ್ಬಿತ್ತು. 'ಸೂಫಿಜಮ್' ತತ್ವವನ್ನೇ ಹಸನಸಾಬ ಪೌರಾಣಿಕ, ಧಾರ್ಮಿಕ, ಐತಿಹಾಸಿಕ ಮತ್ತು ಸಾಮಾಜಿಕ ವಿಚಾರಗಳನ್ನು ಅನ್ವಯಿಸಿ ತಮ್ಮ ಆಟದಲ್ಲಿ ಪ್ರಸ್ತುತ ಪಡಿಸುತ್ತಿದ್ದ. ಕೃಷ್ಣನ ಶಕ್ತಿಯನ್ನು ಪುರುಷ ಕೇಂದ್ರಿತವಾಗಿ ಆತನ ಅಹಮ್ಮಿಕೆಯನ್ನು; ರಾಧೆಯ ಚಾತುರ್ಯದ ಮೂಲಕ ಸ್ತ್ರೀ ಅಧಿಕ್ಯದ ಮೂಲಕ ದಮನ ಮಾಡುವ ಕವಿ ಹಸನಸಾಬ, ಪುರಾಣದ ತಾತ್ವಿಕ ನೆಲೆಯನ್ನು ವರ್ತಮಾನಕ್ಕೆ ಪಲ್ಲಟಗೊಳಿಸುತ್ತಾನೆ. ಪಾರಮಾರ್ಥವು ಲೌಕಿಕಕ್ಕೆ ಪರಿವರ್ತನೆಗೊಳ್ಳುತ್ತದೆ.